# ಶ್ರೀಮಾತೆಯವರೊಡನೆ ಮಾತುಕತೆ



### ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

೧೯೧೨, ಫೆಬ್ರುವರಿ ೨೬ ನೇ ತಾರೀಖು ಶ್ರೀಮಾತೆಯವರು ತಮ್ಮ ತವರುಮನೆಗೆ ಹೋದರು. ಆಶ್ವೀಜ ಮಾಸದ ದುರ್ಗಾಪೂಜೆಯ ಮೊದಲೇ ಕೊಲ್ಕತಾಗೆ ಹಿಂದಿರುಗಿದರು. ಒಂದು ದಿನ ಮಧ್ಯಾಹ್ನ ನಾನು ಅಲ್ಲಿಗೆ ಹೋದೆ. ಶ್ರೀಮಾತೆಯವರ ಪದತಲದಲ್ಲಿ ಒಬ್ಬಾಕೆ ದೀಕ್ಷೆಗಾಗಿ ಅಳುತ್ತಾ ಬೇಡುತ್ತಿದ್ದಾಳೆ. ಶ್ರೀಮಾತೆ ಮಂಚದ ಮೇಲೆ ಕುಳಿತಿದ್ದಾರೆ. ಶ್ರೀಮಾತೆ ಒಪ್ಪದೆ, "ನಾನು ಈ ಹಿಂದೆಯೇ ಹೇಳಿದ್ದೇನೆ, ಈಗ ಮೈ ಸರಿಯಿಲ್ಲ ಎಂದು. ಆದರೂ ಏಕೆ ಬಂದೆ? ಈಗಂತೂ ಸಾಧ್ಯವಿಲ್ಲ" ಎಂದು ಹೇಳುತ್ತಿದ್ದಾರೆ. ಬಿಡಲು ಒಲ್ಲದ ಆಕೆಯ ಮೇಲೆ ಜುಗುಪ್ಸೆ ತೋರಿಸುತ್ತಾ, "ಮಂತ್ರ ಪಡೆದರೆ ಆಗಿ ಹೋಯಿತು. ಮುಂದೆ ಏನು? ನೀನು ನಿನ್ನ ಬಗ್ಗೆ ಮಾತ್ರ ಚಿಂತಿಸುತ್ತೀಯೆ" ಎಂದು ಹೇಳಿದರು. ಆಕೆ ಸಹ ಹಠ ಹಿಡಿದು ಕುಳಿತಿದ್ದಾಳೆ. ಅಲ್ಲಿದ್ದವರಿಗೆಲ್ಲಾ ಇದನ್ನು ನೋಡಿ ಬೇಸರವಾಗುತ್ತಿದೆ. ಉಪಾಯವಿಲ್ಲದೆ ಶ್ರೀಮಾತೆ, "ಆಮೇಲೆ ಬಾ, ನೋಡೋಣ" ಎಂದರು. ಆಗ ಈ ಭಕ್ತೆ, "ಹಾಗಾದರೆ ಯಾರಾದರೂ ನಿಮ್ಮ ಸಂನ್ಯಾಸಿ ಮಕ್ಕಳಿಗೆ ದೀಕ್ಷೆ ಕೊಡಲು ಹೇಳಿ" ಎಂದಳು.

**ಶ್ರೀಮಾತೆ :** ಅವರು ನನ್ನ ಮಾತನ್ನು ಕೇಳದಿದ್ದರೆ?

ಸ್ತ್ರೀ: ಅದು ಹೇಗೆ? ನಿಮ್ಮ ಮಾತನ್ನು ಕೇಳಬೇಕಲ್ಲವೇ?

**ಶ್ರೀಮಾತೆ :** ಈ ವಿಷಯದಲ್ಲಿ ಅವರು ನನ್ನ ಮಾತು ಕೇಳದೆಯೂ ಇರಬಹುದು.

ಕದಲಲು ಒಲ್ಲದ ಆಕೆಯನ್ನು ನೋಡಿ, "ಸರಿ, ಹಾಗಾದರೆ ಖೋಕಾಗೆ (ಸ್ವಾಮಿ ಸುಬೋಧಾನಂದ) ಹೇಳುವೆ. ಆತ ದೀಕ್ಷೆ ಕೊಡುತ್ತಾನೆ" ಎಂದರು. ಆಕೆ, "ನೀವೇ ಕೊಟ್ಟರೆ ಚೆನ್ನಾಗಿರುತ್ತದೆ. ನೀವು ಇಷ್ಟಪಟ್ಟರೆ ಆಗುತ್ತದೆ" ಎಂದು ಹೇಳುತ್ತಾ ೧೦ ರೂಪಾಯಿಯ ಒಂದು ನೋಟು ತೆಗೆದು, "ಈ ಹಣ ತೆಗೆದು ಕೊಳ್ಳಿ. ಏನೇನು ಬೇಕೊ ತರಿಸಿಕೊಳ್ಳಿ" ಎಂದಳು. ಈಕೆಯ ಈ ಉದ್ಧಟತನದಿಂದ ನಮಗೆಲ್ಲಾ ಬೇಸರವಾಯಿತು ಮತ್ತು ಕೋಪ ಬಂತು. ಶ್ರೀಮಾತೆಯವರು ಬಹಳ ಕೋಪದಿಂದ, "ಏನು, ನನಗೆ ಹಣದ ಲೋಭ ತೋರಿಸುವೆಯಾ? ನೀನು ಹೀಗೆ ನನ್ನನ್ನು ಮರುಳು ಮಾಡಲು ಸಾಧ್ಯವಿಲ್ಲ. ತೆಗೆದುಕೊಂಡು ಹೋಗು ನಿನ್ನ ಹಣವನ್ನು" ಎಂದು ಹೇಳುತ್ತಾ, ಕೊಠಡಿಯಿಂದ ಹೊರಬಂದರು. ನಂತರ ಆಕೆಯ ಕಾಟವನ್ನು ತಾಳಲಾರದೆ ಮಹಾಷ್ಟಮಿಯ ದಿನ ದೀಕ್ಷೆ ಎಂದು ನಿಗದಿಪಡಿಸಲಾಯಿತು. ಆಕೆ ಹೊರಟುಹೋದ ಮೇಲೆ, ಪಕ್ಕದ ಕೋಣೆಗೆ ಬಂದು ಕುಳಿತುಕೊಳ್ಳುತ್ತಾ ನನ್ನನ್ನು ಕರೆದರು. "ಬಾಮ್ಮಾ ಇಲ್ಲಿ, ಬಾ. ಇಷ್ಟು ಹೊತ್ತಾದರೂ ನಿನ್ನನ್ನು ವಿಚಾರಿಸಲಿಲ್ಲ. ಹೇಗಿದ್ದೀಯಾ?" ಎಂದರು.

ಸಂಜೆಯಾಗುತ್ತಿದೆ. ದುರ್ಗಾಪೂಜೆಯ ಸಮಯ. ಆದ್ದರಿಂದ ಅನೇಕ ಸ್ತ್ರೀಭಕ್ತರು (ನಾನು ಸಹ) ಹಣ್ಣು, ಸಿಹಿ, ಬಟ್ಟೆ ತೆಗೆದುಕೊಂಡು ಬಂದಿದ್ದಾರೆ. ಶ್ರೀಮಾತೆ ನಗುತ್ತಾ ಅವರೊಂದಿಗೆ ಮಾತನಾಡುತ್ತಿದ್ದಾರೆ. ಸೆಖೆ ಹೆಚ್ಚಾಗಿದ್ದರಿಂದ ನಾನು ಶ್ರೀಮಾತೆಗೆ ಗಾಳಿ ಬೀಸಲಾರಂಭಿಸಿದೆ. ಅಷ್ಟರಲ್ಲಿ ಒಬ್ಬಾಕೆ ಬಂದು ಅತಿ ಬಲವಂತದಿಂದ ನನ್ನ ಕೈಯಲ್ಲಿದ್ದ ಬೀಸಣಿಗೆಯನ್ನು ತೆಗೆದು ಕೊಂಡು ಶ್ರೀಮಾತೆಗೆ ಬೀಸಲಾರಂಭಿಸಿದಳು. ಶ್ರೀಮಾತೆಗೆ ಸ್ವಲ್ಪ ಸೇವೆ ಮಾಡುವುದರಿಂದಲೇ ಎಲ್ಲರಿಗೂ ಆನಂದ. ಆಹಾ! ಈ ಅಲ್ಪಕಾಲದಲ್ಲಿಯೂ ಎಂತಹ ಪ್ರೀತಿ ಕರುಣೆಗಳಿಂದ ನಮ್ಮನ್ನು ಅವರು ಬಂಧಿಸಿಟ್ಟಿದ್ದಾರೆ! ಅವರು ಇದ್ದಷ್ಟು ದಿನ ಬಾಗ್‌ಬಜಾರಿನ ಈ ಮನೆ (ಮಾತೃಮಂದಿರ), ಸಂಸಾರದಲ್ಲಿ ಬೆಂದು ಬಳಲಿದ ಮನುಷ್ಯರಿಗೆ ಒಂದು ಮಧುರ ಶಾಂತಿಸ್ಥಾನವೇ ಆಗಿತ್ತು. ಇದನ್ನು ಹೇಗೆ ತಾನೆ ವರ್ಣಿಸಲು ಸಾಧ್ಯ?

ಹೊರಡುವ ಸಮಯವಾದ್ದರಿಂದ ಶ್ರೀಮಾತೆಗೆ ನಮಸ್ಕರಿಸಿ ಹೇಳಿದೆ, "ಅಮ್ಮಾ, ಸದ್ಯದಲ್ಲೇ ನಾನು ತವರು ಮನೆಗೆ ಹೋಗು ವುದಿದೆ." ಶ್ರೀಮಾತೆ ಪ್ರೀತಿಯಿಂದ, "ಬೇಗ ಬಂದುಬಿಡು. ಮಧ್ಯದಲ್ಲಿ ಪತ್ರ ಬರೆ" ಎಂದರು. ಶ್ರೀಮಾತೆ ಮತ್ತೆ ಹೇಳಿದರು, "ನೀನು ಕೊಟ್ಟ ಸೀರೆ ಯಾವುದು ತೋರಿಸು. ನಾನು ಉಟ್ಟು ಕೊಳ್ಳುತ್ತೇನೆ."

ಸುಮಾರು ಎರಡೂವರೆ ತಿಂಗಳ ನಂತರ ಒಂದು ದಿನ ನಾನು ಶ್ರೀಮಾತೆಯವರ ಬಳಿಗೆ ಹೋದೆ. ಮಹಡಿ ಹತ್ತುತ್ತಿದ್ದಂತೆ ಎದುರಿನ ಕೋಣೆಯಲ್ಲಿ ಶ್ರೀಮಾತೆಯವರನ್ನು ನೋಡಿದೆ. ಒದ್ದೆ ಬಟ್ಟೆಯಲ್ಲೇ (ಬಟ್ಟೆ ಒಗೆಯುತ್ತಿದ್ದರು) ಬಂದು ವಿಚಾರಿಸಿದರು: "ಏಕಮ್ಮಾ, ಇಷ್ಟು ದಿನ ತಡ ಮಾಡಿ ಬಂದೆ?" ಬಟ್ಟೆ ಒಗೆದು ಮುಗಿಸಿ ಒಂದು ಹಾಸಿಗೆಯ ಮೇಲೆ ಕುಳಿತು ಮಾತನಾಡ ಲಾರಂಭಿಸಿದರು. ಮಾತಿನ ಮಧ್ಯದಲ್ಲಿ, "ಆ ಹೆಂಗಸಿನ ದೀಕ್ಷೆ ಆಯಿತೆ?" ಎಂದು ಕೇಳಿದೆ. ಶ್ರೀಮಾತೆ ಹೇಳಿದರು, "ಆಕೆ ಆ ದಿನ ದೀಕ್ಷೆ ತೆಗೆದುಕೊಳ್ಳಲಾಗಲಿಲ್ಲ. ನಾನು ಹೇಳಿದಂತೆಯೇ ಆಯಿತು. ನಾನು ಹೇಳಿದ್ದೆ, 'ನನ್ನ ಆರೋಗ್ಯ ಸರಿಯಾದ ಮೇಲೆ ತೆಗೆದುಕೊ' ಎಂದು. ಹಾಗೆಯೇ ಆಯಿತು. ಅವಳ ಆರೋಗ್ಯ ಕೆಟ್ಟಿದ್ದರಿಂದ ಆಕೆ ಅಂದು ಬರಲಾಗಲಿಲ್ಲ. ಬಹಳ ದಿನಗಳ ನಂತರ ಬಂದು ದೀಕ್ಷೆ ಪಡೆದಳು." *(ಮುಂದುವರಿಯುವುದು)*